ಸಾಗೀತು? ಊರಿನಲ್ಲಿ ಉದ್ಯೋಗ ದೊರೆಯುವುದು ದುಷ್ಕರ.

ಮುಂಬಯಿಗೆ ಹೋಗಿ ನೆಲಸಿ ಸಾಕಷ್ಟು ಹಣಗಳಿಸಿದ. ಆದರೆ ಕಸುಬು ಮಾತ್ರ ಬಹು ಕೆಟ್ಟದು. "ದಾದಾ" ಅಂದರೆ "ಗೂಂಡಾ" ಅಂದರೆ ಪುಂಡರ ಪೋಕರಿಗಳ ಕಸುಬು. ಕಂಟ್ರಾಕ್ಟ್ ಪ್ರಕಾರ ಕೊಲೆ ಮಾಡುವುದು, ತಲೆ ಒಡೆಯುವುದು, ಕಾಲು ಮುರಿಯುವುದು, ಕಣ್ಣು ಕೀಳುವುದು. ಪೊಲೀಸರೊಡನೆ ಸಮಯೋಚಿತವಾಗಿ ಲಾಭದಾಯಕ ಸಂಪರ್ಕವನ್ನಿಟ್ಟುಕೊಳ್ಳುವುದು. ಈ ವೃತ್ತಿಯಿಂದ ಬೇಕಷ್ಟು ಧನವಂತನಾದ. ವೃತ್ತಿಯೇನೋ ಅಪಾಯಕರ. ಆದರೆ ಕೆಲವು ಭ್ರಷ್ಟ ಅಧಿಕಾರಿಗಳ, ಕೆಲವು ಕುಹಕ ರಾಜಕಾರಣ ವ್ಯವಸಾಯಿಗಳ ಆಶ್ರಯದಿಂದ ಚಿರಕಾಲ ಮೆರೆಯಬಹುದು. ಹೊಟ್ಟೆಪಾಡಿಗೆಂದು ಊರು ಬಿಟ್ಟು ದೊಡ್ಡ ನಗರಕ್ಕೆ ಹೋದರೆ ಕೆಲವು ಸಲ ಒಳ್ಳೆಯ ತಂದೆತಾಯಿಯ ಮಕ್ಕಳೂ ದುರ್ಮಾರ್ಗರಾಗಿ ಬಿಡಲೂಬಹುದು. ಉದರ ನಿಮಿತ್ತಂ ಬಹುಕೃತ ವೇಷಂ! ಬಹುಕೃತ ದೋಷಂ?

ಕೆಟ್ಟು ಪಟ್ಟಣ ಸೇರಿದ ಎನ್ನುವ ಬದಲು ಪಟ್ಟಣ ಸೇರಿ ಕೆಟ್ಟ ಎಂಬಂತೆ ಆಗಲೂಬಹುದು.

ಪುಂಡರಲ್ಲಿ ಸಣ್ಣ ಸರ್ದಾರ "ದಾದ" ಎಂಬ ಪದವಿ ತನಗೆ ಭದ್ರವಾದ ನಂತರ ತನ್ನ ಸ್ವಗ್ರಾಮವನ್ನು ಸಗರ್ವ ಠೀವಿ ಆಡಂಬರಗಳಿಂದ ಸಂದರ್ಶಿಸಿದ. ಕೈಯಲ್ಲಿ ವಿದೇಶೀ ವಾಚು. ಓದು ಬರೆಯಲು ಬಾರದಿದ್ದರೂ ಮೂರು ಬಹು ಅಮೂಲ್ಯ ವಿದೇಶೀ ಲೇಖನಿಗಳು. ಕೊರಳಲ್ಲಿ ವಿದೇಶೀ ಕೆಮರಾ, ಹೆಗಲಲ್ಲಿ ಆಕಾಶವಾಣಿ ಭೋರ್ಗರೆಯುವ ಟ್ರಾನ್ಸಿಸ್ಟರ್ ಯಂತ್ರ ಕಣ್ಣಿಗೆ ಕರ್‍ರಗಿನ ಕಪ್ಪು ಕನ್ನಡಕ, ಕಿಸೆಯಲ್ಲಿ ಚೂರಿ.

ಕೆಲವು ದಿನಗಳೇನೋ ಮರ್ಯಾದೆಯಿಂದಲೇ ಸಭ್ಯನಂತೆಯೇ ವರ್ತಿಸಿದ. ಆತನ ಖ್ಯಾತಿ ಜನಜನಿತವಾಗಿದ್ದುದರಿಂದ ಎಲ್ಲರೂ ಆತನನ್ನು ಬಹಿರಂಗಕ್ಕೆ ಆದರದಿಂದಲೇ ಕಾಣುತ್ತಿದ್ದರು. ಅವನ ತಂದೆತಾಯಿಗೆ ಮಾತ್ರ ಸಂಕೋಚ. ಮನಸ್ಸಿನಲ್ಲಿ ಕ್ಲೇಶ. ಅವರು ಪಾಪ! ಬಡವರಾಗಿದ್ದರೂ ದೇವರಿಗೆ ಹೆದರುವವರು ಸದ್ಗುಣಿಗಳು.

★★★

ಕಾಡಿನಲ್ಲಿ ಎಲ್ಲಿಯಾದರೂ ಒಂದು ಬೆಂಕಿಯ ಕೆಂಡ ಬಿದ್ದುಕೊಂಡಿದ್ದರೆ ಒಂದಲ್ಲ ಒಂದು ದಿನ ಅನಾಹುತ ಆಗಿಯೇ ಆಗಬಹುದಷ್ಟೆ? ಕಾಡ್ಗಿಚ್ಚು ಆಗಿಯೇ ಹೋಯಿತು. ಒಂದು ದಿನ ಆತ ಶಾಲೆಯ ಒಬ್ಬ ಹುಡುಗಿಯ ಮೇಲೆ ಕೈಹಾಕಿದ. ಆಕೆಯ ಬೊಬ್ಬಿರಿತವನ್ನು ಕೇಳಿ ಪಕ್ಕದ ಜನರಲ್ಲಿ ಕೆಲವರು ಮತ್ತು ಶಾಲೆಯ ಕೆಲವು ಅಧ್ಯಾಪಕರು, ವಿದ್ಯಾರ್ಥಿಗಳು ಓಡಿ ಬಂದರೂ ಆತನ ಕೈಲ್ಲಿಯ ಚೂರಿಯನ್ನು ನೋಡಿ ದೂರದಲ್ಲಿ ನಿಂತು ಪ್ರೇಕ್ಷಕರಾಗುವುದೇ ಹಿತಕರ ಎಂದು ತಿಳಿದರು. ವಿವೇಕಿಯೂ ಜಾಣರೂ ಆದ ಅಂಗಡಿ ರಾಮಯ್ಯನವರು ಅಂಗಡಿಯನ್ನು ಅವಸರವಸರವಾಗಿ ಮುಚ್ಚಿದರು – ಏನೋ ಹಠಾತ್ತಾಗಿ ಹಲ್ಲು ನೋವೋ ಜಾಡಣೆಯೋ ಸುರುವಾಯಿತಂತೆ.

ರುದ್ರಪ್ಪ ಹುಡುಗಿಯ ಬೊಬ್ಬಿರಿದ ಅಳುವಿನ ಚೀತ್ಕಾರವನ್ನು ಕೇಳಿ ಓಡಿ ಬಂದ.

ಆನಂತರ ನಡೆದುದು ದೊಡ್ಡ ದುರಂತ. ಮುಂಬಯಿಯಿಂದ ಬಂದ ಪುಂಡ ತಲೆಯೊಡೆದು ಹೆಣವಾದ. ರುದ್ರಪ್ಪ ಪೊಲೀಸರ ಕೈಯಲ್ಲಿ ಸಿಕ್ಕಿಬಿದ್ದ.

★★★

ಕೋರ್ಟಿನಲ್ಲಿ ಕೇಸ್ ನಡೆಯುತ್ತಿದ್ದಾಗ ರುದ್ರಪ್ಪನ ವಕೀಲರು ಊರಿನ ಹತ್ತು ಸಮಸ್ತರಿಂದ ರುದ್ರಪ್ಪನಿಗೆ ಹಿತವಾಗುವಂತೆ ಅವನ ಶಾಂತ ಸ್ವಭಾವ, ಸೌಜನ್ಯ, ತಾಳ್ಮೆಯ ನಡತೆ ಮತ್ತು